ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 564

2. ಸದಸ್ಯರ ಹೆಸರು : ಶ್ರೀ. ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

3. ಉತ್ತರಿಸಬೇಕಾದ ದಿನಾಂಕ : 24-09-2020.

4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸ	ಪ್ರಶ್ನೆ	ಉತ್ತರ
ಅ	ಕೇಂದ್ರ ಸರ್ಕಾರ ರಾಜ್ಯಕ್ಕೆ ಜಿ.ಎಸ್.ಟಿ. ಪರಿಹಾರ ನೀಡದಿರುವುದರಿಂದ ರಾಜ್ಯ ಸರ್ಕಾರಕ್ಕೆ ಆಗುವ ಪರಿಣಾಮಗಳೇನು;	ರಾಜ್ಯದ ರಾಜಸ್ವ ಸ್ವೀಕೃತಿಗಳಲ್ಲಿ ಜಿ.ಎಸ್.ಟಿ ಪರಿಹಾರವು 2021-22ನೇ ಸಾಲಿನವರೆಗೆ ಒಂದು ಭಾಗವಾಗಿರುತ್ತದೆ. 2020-21ನೇ ಸಾಲಿನ ಆಯವ್ಯಯದಲ್ಲಿ ಜಿ.ಎಸ್.ಟಿ. ಪರಿಹಾರವು ರೂ. 16116.00 ಕೋಟಿಗಳು ಎಂದು ಅಂದಾಜಿಸಲಾಗಿತ್ತು. ಜುಲೈ-20 ರ ಅಂತ್ಯದವರೆಗೆ ಕಳೆದ ವರ್ಷದ ಬಾಕಿ ಮೊತ್ತ ರೂ.7265.83 ಕೋಟಿಗಳು ಸ್ವೀಕೃತವಾಗಿರುತ್ತದೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ಜಿ.ಎಸ್.ಟಿ. ಪರಿಹಾರ ನೀಡದಿರುವುದರಿಂದ ಆಯವ್ಯಯದಲ್ಲಿ ಅಂದಾಜಿಸಿರುವ ರಾಜಸ್ವ ಕೊರತೆ ಉಂಟಾಗಬಹುದು. GST ನಷ್ಟ ಪರಿಹಾರ ಸಂಬಂಧ, ರಾಜ್ಯ ಸರ್ಕಾರವು ಆಯ್ಕೆ-1ನ್ನು ಆಯ್ಕೆಮಾಡಿಕೊಂಡಿದ್ದು, ಇದರಲ್ಲಿ ರೂ. 11,324 ಕೋಟಿ ಸಾಲ ಪಡೆಯಲು ಅವಕಾಶವಿದೆ. ಕೇಂದ್ರ ಸರ್ಕಾರವು ಅಸಲು ಮತ್ತು ಬಡ್ಡಿಯನ್ನು ಮರುಪಾವತಿ ಮಾಡುತ್ತದೆ ಎಂದು ತಿಳಿಸಿರುತ್ತದೆ.
ಆ	ಇದರಿಂದ, ರಾಜ್ಯದ ಆರ್ಥಿಕ ಹೊಣೆಗಾರಿಕೆಯ ಮೇಲೆ ಪರಿಣಾಮ ಬೀರುವುದಿಲ್ಲವೇ; ಬೀರುವುದಾದರೆ ಯಾವ ಪ್ರಮಾಣದಲ್ಲಿ ಬೀರುತ್ತದೆ;	ಕೇಂದ್ರ ಸರ್ಕಾರ ರಾಜ್ಯಕ್ಕೆ ಜಿ.ಎಸ್.ಟಿ. ಪರಿಹಾರ ನೀಡದಿರುವುದರಿಂದ ರಾಜಸ್ವ ಸ್ವೀಕೃತಿಗಳಲ್ಲಿ ಕೊರತೆಯಾಗುತ್ತದೆ. ಆರ್ಥಿಕ ವರ್ಷ ಮುಕ್ತಾಯದ ವರಗೆ ಪ್ರಮಾಣವನ್ನು ನಿಖರವಾಗಿ ಅಂದಾಜಿಸಲು ಬರುವುದಿಲ್ಲ.
ಇ	ಇದರಿಂದ ಶೇಕಡವಾರು ಎಷ್ಟು ಹಾನಿಯಾಗುತ್ತದೆ; ಈ ಆರ್ಥಿಕ ಬಿಕ್ಕಟ್ಟನ್ನು ಹೇಗೆ ನಿಭಾಯಿಸಲಾಗುತ್ತದೆ?	ಆಯವ್ಯಯದಲ್ಲಿ ಅಂದಾಜಿಸಿರುವ ಮೊತ್ತಕ್ಕೆ ಜುಲೈ-2020 ರ ಅಂತ್ಯದ ವರೆಗೆ ಸ್ವೀಕೃತವಾಗಿರುವ ಜಿ.ಎಸ್.ಟಿ. ಪರಿಹಾರವು ಶೇಕಡ 45% ಇರುತ್ತದೆ. ನಿಖರವಾದ ಮೊತ್ತ/ಶೇಕಡದ ಬಗ್ಗೆ ಆರ್ಥಿಕ ವರ್ಷದ ಅಂತ್ಯದವರೆಗೆ ಅಂದಾಜಿಸಲು ಬರುವುದಿಲ್ಲ. ಈ ಆರ್ಥಿಕ ಬಿಕ್ಕಟ್ಟನ್ನು ನಿಭಾಯಿಸಲು ರಾಜ್ಯ ಸರ್ಕಾರದಿಂದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅವುಗಳ ಪೈಕಿ ಪ್ರಮುಖ ಕ್ರಮಗಳ ಮಾಹಿತಿ ಕೆಳಕಂಡಂತೆ ಇರುತ್ತದೆ. 1. ಸಂಪನ್ಮೂಲಗಳ ಕ್ರೂಢೀಕರಣಕ್ಕೆ ಹೆಚ್ಚಿನ ಒತ್ತು ನೀಡುವುದು. 2. ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುವುದು. 3. ಕೇಂದ್ರ ಸರ್ಕಾರವು ಅನುವು ಮಾಡಿಕೊಡುವಷ್ಟು ಸಾಲವನ್ನು ಪಡೆಯುವುದು.

ಸಂಖ್ಯೆ: ಆಇ 47 ಬಿಜಿಎಲ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ